ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ಮೃತ ನನ್ನ ಮಗ ರಶೀದ್‌ಗೆ 3 ಜನ ಸಹೋದರರು. ಒಬ್ಬ ತಮ್ಮ ಮತ್ತು ಇಬ್ಬರು ತಂಗಿ. ತಂಗಿಗೆ ಮದುವೆಯಾಗಿದೆ. ತಮ್ಮ ಮದುವೆಯಾಗಿಲ್ಲ 12ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ತಮ್ಮನ ಹೆಸರು ನಿಹಾಲಿಯಂ. ನಿಹಾಲಿಯಂ ನನ್ನು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಯಾಕೆ ಮಾಡಿಲ್ಲ ಎಂದರೆ ಆತ ಚಿಕ್ಕವನಾಗಿರುವ ಕಾರಣ ಸೇರಿಸಿಲ್ಲ. ಆತನನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ಅಭ್ಯಂತರ ಇಲ್ಲ. ನನ್ನ ಗಂಡನಿಗೆ ವಯಸ್ಸಾಗಿರುವ ಕಾರಣ ಆತ ಏನೂ ಕೆಲಸ ಮಾಡುತ್ತಿಲ್ಲ. ನಿಪಿ-9 ನನ್ನ ಗಂಡನಿಗೆ ಸಂಬಂಧಿಸಿದ ದಾಖಲೆ. ನಿಪಿ-10 ನನ್ನ ಆಧಾರ್ ಕಾರ್ಡ್. ನಿಪಿ-9ರ ಪ್ರಕಾರ ನಾನು ಮತ್ತು ನನ್ನ ಗಂಡ ಜೊತೆಯಲ್ಲಿ ವಾವಿರುವುದಿಲ್ಲ ಎಂದರೆ ನಾವು ಊರಿನ ವಿಳಾಸ ಕೊಟ್ಟಿರುತ್ತೇವೆ ಹಳೆ ವಿಳಾಸ ವನ್ನು ಬದಲಾಯಿಸಿಲ್ಲ. ನನ್ನ ಗಂಡ ನಮ್ಮ ಮನೆಗೆ ಬಂದಿರುವ ಕಾರಣ ಅವರ ವಿಳಾಸವನ್ನು ಬದಲಾಯಿಸಿಲ್ಲ. ನನ್ನ ಗಂಡನ ವಿಳಾಸ ಬದಲಾಗಿದ್ದರಿಂದ ನನ್ನ ಜೊತೆಯಲ್ಲಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ. ರಶೀದ್ ರವರು ತೀರಿಕೊಳ್ಳುವಾಗ ಯೂಸಫ್ ನನ್ನ ಜೊತೆ ಇರಲಿಲ್ಲ ಎಂದರೆ ಸರಿಯಲ್ಲ.

ಮೃತ ರಶೀದ್ ರವರು 1ನೇ ಎದುರುದಾರರ ಜೊತೆಯಲ್ಲಿ 8 ವರ್ಷಗಳ ಕಾಲ ಕೆಲಸ ಮಾಡಿಕೊಂಡಿದ್ದರು. ನಿಪಿ-12ರ ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. 1ನೇ ಎದುರುದಾರರನ್ನು ಸಾಕ್ಷಿ ಮಾಡಿಸುತ್ತೇನೆ. ಅಪಘಾತವಾದ ದಿನದಂದು ವಾಹನವನ್ನು ಚಲಾಸುತ್ತಿರಲಿಲ್ಲ ಪಕ್ಕದಲ್ಲಿ ಕುಳಿದ್ದರು ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಆಸ್ಪತ್ರೆ

ಹೋದಾಗ ಆತ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ನಂತರ ಆತ ತೀರಿಕೊಂಡಿದ್ದರು. ಮೃತ ರಶೀದ್ ಗೆ ದಿನಕ್ಕೆ 2ವರೆ ಸಾವಿರ ಸಂಬಳ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ. ನನ್ನ ಮಗನ ಮರಣದಿಂದ ನಮಗೆ ಯಾವುದೇ ಆರ್ಥಿಕ ತೊಂದರೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಮೃತನ ಅಂತ್ಯಸಂಸ್ಕಾರಕ್ಕೆ ಮತ್ತು ಆಸ್ಪತ್ರೆಯಲ್ಲಿ 3 ಲಕ್ಷ ಹಣ ಖರ್ಚಾಗಿರುತ್ತದೆ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದೆರ ಸರಿಯಲ್ಲ. ನಾನು ಹೇಳಿದಷ್ಟು ಹಣ ಖರ್ಚಾಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ನನ್ನ ಮಗ ಅಪಘಾತವಾದ ಸಮಯದಲ್ಲಿ 1ನೇ ಎದುರುದಾರರ ವಾಹನದಲ್ಲಿ ಚಾಲಕನಾಗಿರಲಿಲ್ಲ ಪ್ರಯಾಣಿಕನಾಗಿದ್ದ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಮಗನಿಗೆ 30 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಆತನಿಗೆ 27 ವರ್ಷ ವಯಸ್ಸಾಗಿತ್ತು. ಪರಿಹಾರ ಪಡೆಯಲು ಈ ಅರ್ಜಿ ಬಿಟ್ಟು ಬೇರೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.

ಸಾಕ್ಷಿಗೆ ಕನ್ನಡ ಭಾಷೆ ಬರದೆ ಇರುವುದರಿಂದ ತರ್ಜುಮೆದಾರರಾದ ಶ್ರೀಮತಿ ಆರೀಫಾ ರವರು ಭಾಷಾಂತರಿಸಿರುತ್ತಾರೆ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು